# ಎರಡು ಕಿರುಗತೆಗಳು

■ **ಆಧಾರ: ಡಿ.ಎನ್.ಶ್ರೀನಾಥ್**

## ಕರ್ತವ್ಯನಿಷ್ಠೆ


ಚಿತ್ರಗಳು: ಮಂಜುನಾಥ ಹುಲಕೊಪ್ಪ

ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರರು ಮತ್ತು ದೇಶಭಕ್ತ ಅಧ್ಯಾಪಕರಾದ ಸೂರ್ಯಸೇನರು ಬಂಗಾಳದ ವಿಶ್ವವಿದ್ಯಾಲಯವೊಂದಕ್ಕೆ ನೇಮಕ ಮಾಡಲ್ಪಟ್ಟಿದ್ದರು. ಅವರು ನಿರ್ಭೀಕ ಮತ್ತು ಆದರ್ಶ ಅಧ್ಯಾಪಕರಾಗಿದ್ದರು.

ಆ ದಿನಗಳಲ್ಲಿ ವಿದ್ಯಾಲಯದಲ್ಲಿ ವಾರ್ಷಿಕ ಪರೀಕ್ಷೆಗಳು ನಡೆಯುತ್ತಿದ್ದವು. ಸೂರ್ಯಸೇನರು ಒಂದು ಕೊಠಡಿಯಲ್ಲಿ ಪರೀಕ್ಷಾಮೇಲ್ವಿಚಾರಕರಾಗಿ ನೇಮಿಸಲ್ಪಟ್ಟಿದ್ದರು. ಪರೀಕ್ಷೆ ಬರೆಯುತ್ತಿದ್ದ ವಿದ್ಯಾರ್ಥಿಗಳಲ್ಲಿ ಇಂಗ್ಲಿಷ್ ಪ್ರಧಾನ ಅಧ್ಯಾಪಕರ ಪುತ್ರ ಕಾಪಿ ಮಾಡಿ ಬರೆಯುತ್ತಿದ್ದ. ಸೂರ್ಯಸೇನರು ಇದನ್ನು ಗಮನಿಸಿ ಅವನನ್ನು ಹಿಡಿದು, ಪರೀಕ್ಷೆಯಿಂದ ಅವನನ್ನು ವಂಚಿತಗೊಳಿಸಿದರು.

ಪರೀಕ್ಷೆಯ ಫಲಿತಾಂಶ ಬಂದಾಗ ಆ ವಿದ್ಯಾರ್ಥಿ ಅನುತ್ತೀರ್ಣನಾಗಿದ್ದ. ಸೂರ್ಯಸೇನರ ಸಹೋದ್ಯೋಗಿಗಳಿಗೆ ಇನ್ನು ಸೂರ್ಯಸೇನರ ನೌಕರಿ ಉಳಿಯುವುದಿಲ್ಲವೆಂದು ಅನ್ನಿಸಿತು.

ಕೆಲವು ದಿನಗಳ ನಂತರ ಪ್ರಧಾನ ಅಧ್ಯಾಪಕರು ಸೂರ್ಯಸೇನರನ್ನು ತಮ್ಮ ಕೊಠಡಿಗೆ ಬರುವಂತೆ ಕರೆ ಕಳುಹಿಸಿದರು. ಅವರು ಸೂರ್ಯಸೇನರನ್ನು ಅವಮಾನದ ದೃಷ್ಟಿಯಿಂದ ನೋಡದೆ, ಹೃದಯಪೂರ್ವಕವಾಗಿ ಸ್ವಾಗತಿಸಿ ಪ್ರೀತಿ ಮತ್ತು ಸ್ನೇಹದಿಂದ ಹೇಳಿದರು, ಈ ವಿದ್ಯಾಲಯದಲ್ಲಿ ನಿಮ್ಮಂಥ ಕರ್ತವ್ಯನಿಷ್ಠೆ ಮತ್ತು ಆದರ್ಶ ಅಧ್ಯಾಪಕರಿರುವುದನ್ನು ನೋಡಿ ನನಗೆ ತುಂಬಾ ಸಂತೋಷವಾಯಿತು. ನೀವು ನನ್ನ ಮಗನಿಗೆ ಶಿಕ್ಷೆ ವಿಧಿಸುವುದಕ್ಕೆ ಹಿಂದುಮುಂದು ನೋಡಲಿಲ್ಲ. ಒಂದು ವೇಳೆ ನೀವು ಅವನು ಕಾಪಿ ಮಾಡಿದ ನಂತರವೂ ಉತ್ತೀರ್ಣಗೊಳಿಸಿದ್ದರೆ, ನಾನು ನಿಮ್ಮನ್ನು ಡಿಸ್‌ಮಿಸ್ ಮಾಡುತ್ತಿದ್ದೆ.

ಸಾರ್, ಒಂದು ವೇಳೆ ನೀವು ಈಗಲೂ ನಿಮ್ಮ ಮಗನನ್ನು ಉತ್ತೀರ್ಣಗೊಳಿಸಲು ನನ್ನನ್ನು ವಿವಶಗೊಳಿಸಿದ್ದರೆ, ನಾನು ನನ್ನ ರಾಜೀನಾಮೆಯ ಪತ್ರವನ್ನು ನನ್ನ ಜೇಬಿನಲ್ಲಿಟ್ಟುಕೊಂಡು ಬಂದಿದ್ದೆ. ಸೂರ್ಯಸೇನರು ಗರ್ವದಿಂದ ಹೇಳಿದರು.

ಅವರ ಈ ಮಾತಿನಿಂದ ಪ್ರಧಾನ ಅಧ್ಯಾಪಕರಿಗೆ ಸೂರ್ಯಸೇನರ ಬಗ್ಗೆ ಇದ್ದ ಗೌರವ ಇಮ್ಮಡಿಯಾಯಿತು. ■

## ಗೌರವ

ಇದು ಜಪಾನ್‌ಗೆ ಸಂಬಂಧಿಸಿದ ಘಟನೆ. ಒಬ್ಬ ಕಳ್ಳ ಒಮ್ಮೆ ಕದಿಯುವ ಉದ್ದೇಶದಿಂದ ಒಬ್ಬ ಶ್ರೀಮಂತನ ಮನೆಯೊಳಗೆ ನುಗ್ಗಿದ. ಶ್ರೀಮಂತ ನಿದ್ರಿಸುತ್ತಿರುವುದನ್ನು ನೋಡಿದ ಕಳ್ಳ ಬೆಲೆ ಬಾಳುವ ವಸ್ತುಗಳನ್ನು ತನ್ನ ಸೂಟ್‌ಕೇಸಿನೊಳಗೆ ತುಂಬಲಾರಂಭಿಸಿದ. ಕಡೆಗೆ ಸೂಟ್‌ಕೇಸಿನಲ್ಲಿ ಇನ್ನೂ ಜಾಗವಿರುವುದನ್ನು ನೋಡಿದ ಕಳ್ಳ, ಅಲ್ಲಿದ್ದ ಕೆಲವು ಪುಸ್ತಕಗಳು ಮತ್ತು ಬಟ್ಟೆಗಳನ್ನೂ ತುರುಕಿಕೊಂಡ.

ಒಮ್ಮೆಲೆ ಶ್ರೀಮಂತನಿಗೆ ಎಚ್ಚರವಾಯಿತು. ಪಕ್ಕದ ಕೋಣೆಯಲ್ಲಾಗುತ್ತಿದ್ದ ಸದ್ದಿನಿಂದ ಕಳ್ಳನೊಬ್ಬ ಒಳಗೆ ನುಸುಳಿರಬಹುದೆಂದು ಅವನು ಕೂಡಲೇ ಅರಿತ. ಆದರೆ ಏನು ಮಾಡುವುದೆಂದು ಅವನಿಗೆ ತಿಳಿಯುತ್ತಿರಲಿಲ್ಲ. ಕಳ್ಳನಿದ್ದ ಕೋಣೆಯಲ್ಲಿಯೇ ಫೋನ್ ಸಹ ಇತ್ತು.

ಕಡೆಗೆ ಏನೂ ಹೊಳೆಯದೆ ಶ್ರೀಮಂತ ಗ್ರಾಮಫೋನಿನಲ್ಲಿ ರಾಷ್ಟ್ರಗೀತೆಯ ರಿಕಾರ್ಡನ್ನು ಹಾಕಿದ. ಕಳ್ಳ ರಾಷ್ಟ್ರಗೀತೆಯನ್ನು ಕೇಳಿ ಸಾವಧಾನ್ ಭಂಗಿಯಲ್ಲಿ ನಿಂತ. ಶ್ರೀಮಂತ ಕೂಡಲೇ ಬಂದು ಅವನ ಕೈಕಾಲು ಕಟ್ಟಿ, ಪೊಲೀಸರ ವಶಕ್ಕೆ ಒಪ್ಪಿಸಿದ.

ಸಾಕ್ಷಿಗೆ ಶ್ರೀಮಂತನನ್ನೂ ಕರೆಸಲಾಯಿತು. ಶ್ರೀಮಂತ ತನ್ನ ಬುದ್ಧಿವಂತಿಕೆಯನ್ನು ಕೊಚ್ಚಿಕೊಳ್ಳುತ್ತಾ ತಾನು ಕಳ್ಳನನ್ನು ಹಿಡಿದ ಕ್ರಮದ ಬಗ್ಗೆ ಹೇಳಿದ. ಕಳ್ಳನ ರಾಷ್ಟ್ರಪ್ರೇಮವನ್ನು ನೋಡಿ ಅಲ್ಲಿದ್ದ ಜನರು ಆಶ್ಚರ್ಯಗೊಂಡರು. ನ್ಯಾಯಾಲಯ ತನ್ನ ತೀರ್ಮಾನವನ್ನು ಹೀಗೆ ಹೇಳಿತು: ಇಷ್ಟು ದೊಡ್ಡ ರಾಷ್ಟ್ರಪ್ರೇಮಿ ತನ್ನ ಅಸಹಾಯಕತೆಯಿಂದಾಗಿಯೇ ಕಳ್ಳತನಕ್ಕೆ ಇಳಿದಿದ್ದಾನೆ. ನಿಜವಾದ ಕಾರಣ ತಿಳಿಯದೆ ಇವನಿಗೆ ಶಿಕ್ಷೆಯನ್ನು ವಿಧಿಸುವುದು ಅಪರಾಧವಾಗುತ್ತದೆ. ಹೀಗಾಗಿ ಈಗ ಇವನನ್ನು ಬಿಡುಗಡೆಗೊಳಿಸಲಾಗುತ್ತಿದೆ, ಇದರೊಂದಿಗೆ ಭವಿಷ್ಯದಲ್ಲಿ ಕಳ್ಳತನ ಮಾಡದಿರಲು ಉಪದೇಶವನ್ನೂ ಕೊಡಲಾಗುತ್ತದೆ.

ಆದರೆ ನ್ಯಾಯಾಲಯ ಶ್ರೀಮಂತನ ವಿರುದ್ಧ ತನ್ನ ತೀರ್ಮಾನವನ್ನು ಪ್ರಕಟಿಸಿದಾಗ ಅಲ್ಲಿದ್ದವರು ಮತ್ತೂ ಆಶ್ಚರ್ಯಗೊಂಡರು. ನ್ಯಾಯಾಲಯ ಶ್ರೀಮಂತನ ವಿರುದ್ಧ ಹೀಗೆ ತೀರ್ಪು ನೀಡಿತ್ತು: ನ್ಯಾಯಾಲಯವು ಶ್ರೀಮಂತನಿಗೆ ರಾಷ್ಟ್ರಗೀತೆಯನ್ನು ಅವಮಾನಿಸಿದ್ದಕ್ಕಾಗಿ ಎರಡು ವರ್ಷದ ಜೈಲು ಶಿಕ್ಷೆಯನ್ನು ವಿಧಿಸುತ್ತದೆ. ಯಾಕೆಂದರೆ, ರಾಷ್ಟ್ರಗೀತೆಯನ್ನು ಹಾಕಿದಾಗ ಶ್ರೀಮಂತ ಸಾವಧಾನ್ ಭಂಗಿಯಲ್ಲಿ ನಿಲ್ಲದೆ ಕಳ್ಳನ ಕೈಕಾಲುಗಳನ್ನು ಕಟ್ಟುವುದರಲ್ಲಿ ನಿರತನಾಗಿದ್ದ! ■

